ಪ್ರಿನ 124 ಸಿಯುಸ್ಥಂತ 2011
C.NO.15454

RTI. 2

ತಪನ್ ಸೇನಾಪತಿ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

TAPAN SENAPATI, I.A.S.
PRINCIPAL SECRETARY TO GOVT.
DEPT. OF PERSONNEL AND
ADMINISTRATIVE REFORMS
(JANASPANDANA)

GOVERNMENT OF KARNATAKA

(TEL No.) ದೂರವಾಣಿ : ಕಛೇರಿ : 22860120
22033188
(R) ನಿವಾಸ : 66530945
ಕರ್ನಾಟಕ ಸರ್ಕಾರದ ಸಚಿವಾಲಯ
20ನೇ ಮಹಡಿ, ವಿ.ವಿ. ದೊಡ್ಡ ಗೋಪುರ
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು – 560 001
KARNATAKA GOVT. SECRETARIAT
20TH FLOOR, V.V. MAIN TOWER
Dr. AMBEDKAR VEEDHI
BANGALORE - 560 001

ಅ.ಸ.ಪತ್ರ ಸಂಖ್ಯೆ:ಸಿಆಸುಇ/20/ಆರ್‌ಟಿಐ/2010 ದಿ: 10-08-2011

ಮಾನ್ಯರೆ,

ವಿಷಯ:- ಮಾಹಿತಿ ಹಕ್ಕು ಅಧಿನಿಯಮ-2005ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

-----

ACS/Energy/F/T/No. 7204
Date: 23/08/2011

ಮಾಹಿತಿ ಹಕ್ಕು ಅಧಿನಿಯಮ-2005 ಜಾರಿಗೆ ಬಂದು ಆರು ವರ್ಷಗಳು ಕಳೆದಿದ್ದರೂ ಈಗಲೂ ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳ ಮೇಲೆ ಇನ್ನೂ ಹಲವು ಇಲಾಖೆಗಳು ಕ್ರಮ ಜರುಗಿಸಿಲ್ಲವೆಂದು ಸರ್ಕಾರಕ್ಕೆ ದೂರುಗಳು ಬಂದಿವೆ. ಆದುದರಿಂದ ನೀವು ವೈಯಕ್ತಿಕ ಆಸಕ್ತಿ ವಹಿಸಿ ಈ ಕೆಳಕಂಡಂತೆ ಕ್ರಮವನ್ನು ತುರ್ತಾಗಿ ನಿಮ್ಮ ಕಛೇರಿಗೆ ಸಂಬಂಧಿಸಿದಂತೆ ಕ್ರಮ ಜರುಗಿಸಲು ಹಾಗೂ ನಿಮ್ಮ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳಿಗೆ ತುರ್ತಾಗಿ ಸೂಚನೆ ನೀಡಿ ಕ್ರಮ ಜರುಗಿಸಿರುವುದನ್ನು ದೃಢಪಡಿಸಿಕೊಳ್ಳಲು ಕೋರುತ್ತೇನೆ.

1. ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1)(ಎ)ರನ್ವಯ ಎಲ್ಲಾ ಸರ್ಕಾರಿ ಇಲಾಖೆಗಳು ಹಾಗೂ ಕಚೇರಿಗಳಲ್ಲಿ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಕ್ರಮಬದ್ಧವಾದ ವಿಷಯಪಟ್ಟಿ ಮತ್ತು ಸೂಚಿತ ಪಟ್ಟಿಯನ್ನೊಳಗೊಂಡ ಎಲ್ಲಾ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ಮಾಹಿತಿಯನ್ನು ಕಾಲಕಾಲಕ್ಕೆ ಪರಿಷ್ಕರಿಸತಕ್ಕದ್ದು ಹಾಗೆಯೇ ಸದರಿ ಅಧಿನಿಯಮದ ಕಲಂ4(1)(ಬಿ)ರನ್ವಯ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು, ಆಯಾ ಇಲಾಖೆಯಲ್ಲಿನ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಮೇಲ್ಮನವಿ ಪ್ರಾಧಿಕಾರಿಗಳ ಹೆಸರು, ಹುದ್ದೆಗಳನ್ನು ಸದರಿ ಕಲಂನಲ್ಲಿ ತಿಳಿಸಿರುವಂತೆ ಇತರ ವಿವರಗಳೊಂದಿಗೆ ಕಚೇರಿಗಳ ಮುಂಭಾಗದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು. ಹಾಗೆಯೇ ಈ ಎಲ್ಲಾ ವಿವರಗಳನ್ನು ಕಲಂ4(2)ರನ್ವಯ ಸ್ವಪ್ರೇರಿತವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ಜರುಗಿಸತಕ್ಕದ್ದು.

..2/-

ಅಪರ ಮುಖ್ಯ ಕಾರ್ಯದರ್ಶಿ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ

SO(KF)

**2.** ಅರ್ಜಿದಾರರು ಮಾಹಿತಿಗಾಗಿ ಕೋರಿಕೆ ಸಲ್ಲಿಸಿದಾಗ ಅರ್ಜಿಯ ಜೊತೆಗೆ ಶುಲ್ಕವನ್ನು ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರಿನಲ್ಲಿ ಪೇ-ಆರ್ಡರ್, ಇಂಡಿಯನ್ ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಬ್ಯಾಂಕರ್ಸ ಚೆಕ್, ಡಿ.ಡಿ. ಅಥವಾ ನಗದು ರೂಪದಲ್ಲಿ ನೀಡಿದಾಗ ಅದನ್ನು ಅಂಗೀಕರಿಸತಕ್ಕದ್ದು. ಅರ್ಜಿದಾರರಿಂದ ನಿಗದಿತ ಅರ್ಜಿಯ ಶುಲ್ಕ ಸಂದಾಯವಾದ ಬಗ್ಗೆ ಪರಿಶೀಲಿಸಿ ಮಾಹಿತಿಯನ್ನು ನೀಡಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಶುಲ್ಕವನ್ನು ಸ್ವೀಕರಿಸಿದ ನಂತರ ಅದನ್ನು ನಿಯಮಾನುಸಾರ ಲೆಕ್ಕ ಶೀರ್ಷಿಕೆ "0070-60-118-0-01" "Receipt under Right to Information Act 2005" ಗೆ ಜಮಾ ಮಾಡತಕ್ಕದ್ದು. ಮಾಹಿತಿಯು ಬೇರೆ ಇಲಾಖೆಗೆ ಸಂಬಂಧಿಸಿದಲ್ಲಿ, ಮಾಹಿತಿ ಹಕ್ಕು ಕಾಯಿದೆ 2005ರ ಕಲಂ 6(3)ರನ್ವಯ ಅರ್ಜಿಯನ್ನು ಐದು ದಿನಗಳೊಳಗಾಗಿ ವರ್ಗಾಯಿಸಿ ಅರ್ಜಿದಾರರಿಗೆ ಮಾಹಿತಿ ನೀಡತಕ್ಕದ್ದು.

3. ಅರ್ಜಿದಾರರು ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಅರ್ಜಿ ಸಲ್ಲಿಸಿದಲ್ಲಿ, ಮೇಲ್ಮನವಿ ಪ್ರಾಧಿಕಾರವು ನಿಗದಿತ ಕಾಲಾವಧಿಯೊಳಗೆ ಮೇಲ್ಮನವಿಯ ಮೇಲೆ ಆದೇಶ ಮಾಡತಕ್ಕದ್ದು.

4. ಮೇಲ್ಮನವಿ ಪ್ರಾಧಿಕಾರದ ಆದೇಶದ ನಂತರ ಅರ್ಜಿದಾರರು ಇಚ್ಛಿಸಿದಲ್ಲಿ, ಸದರಿ ಆದೇಶದ ವಿರುದ್ಧ ಕರ್ನಾಟಕ ಮಾಹಿತಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

5. ಭಾರತ ಸರ್ಕಾರವು ಮಾಹಿತಿ ಹಕ್ಕು ಅಧಿನಿಯಮ-2005ರಡಿಯಲ್ಲಿ ನಿಗದಿಪಡಿಸಿರುವ ಲಾಂಛನವನ್ನು (LOGO) ಪ್ರಚುರಪಡಿಸಲು ಎಲ್ಲಾ ಅಗತ್ಯ ಕ್ರಮ ಜರುಗಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ತುರ್ತು ಅಗತ್ಯ ಕ್ರಮ ಜರುಗಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನ - ಮಾಹಿತಿ ಹಕ್ಕು ಕೋಶ)ಗೆ ಮಾಹಿತಿ ನೀಡಲು ಕೋರಲಾಗಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

Hiremath

ಕೆ.ಪೇ.ರಿ

ಶ್ರೀಮತಿ ಶೈಲಜಾ...

27.8.

ಸರ್ಕಾರದ ಉಪ ಕಾರ್ಯದರ್ಶಿಗಳು

ಇಂಧನ ಇಲಾಖೆ

ವಿಕಾಸಸೌಧ, ಬೆಂಗಳೂರು